ವಾರವಾಯಿತು, ಎರಡು ವಾರವಾಯಿತು. ದಿನವೂ ಆಸ್ಪತ್ರೆಗೆ ಹೋಗಿ ಬರುತ್ತಿದ್ದರು. 'ಏನಾರ ಮಾಡಿ ಸಾ. ಹಸು ಹಪ್ಪಳ ಆಗೋತು. ನಮ್ಮನೇಲಿ ಯಾರ್ಗೂ ತಿಂದ ಮುದ್ದೆ ಮೈಗೆ ಹತ್ತುತ್ತಿಲ್ಲ.' ಎಂದು ಚಿಕ್ಕಮ್ಮ ತನ್ನ ಗೋಳು ತೋಡಿಕೊಂಡಳು. ಲೋಕಿಯ ಮಕ್ಕಳು ಹಸು ಬಳಿ ಕುಳಿತುಕೊಂಡು ಕಾಣತೊಡಗಿದ್ದ ಪಕ್ಕೆಲುಬುಗಳನ್ನು ಎಣಿಸುತ್ತಿದ್ದರು. ಚಿಕ್ಕಮ್ಮನಿಗೆ ದುಃಖ ತಡೆಯಲಾಗುತ್ತಿರಲಿಲ್ಲ. ಲೋಕಿ, ವಿಜಯಮ್ಮ ಗರಬಡಿದಂತಾದರು. 'ಹುಷಾರಾಗುತ್ತೋಗ್ರಿ. ಟ್ರೀಟ್‌ಮೆಂಟ್ ಕೊಟ್ಟ ಕೂಡ್ಲೇ ಹುಷಾರಾಗುತ್ತ? ಸ್ವಲ್ಪ ಟೈಮ್ ಬೇಕು' ಎಂದು ಜೋರು ಮಾಡಿ ಕಳುಹಿಸುತ್ತಿದ್ದ ಡಾಕ್ಟ್ರಿಗೆ ಪೀಕಲಾಟಕ್ಕೆ ಇಟ್ಟುಕೊಂಡಿತು. ಅವನ ಉಡಾಫೆ ಕಡಿಮೆಯಾಯಿತು. ಯಾಕೋ ಈ ಹಸು ಸ್ಥಿತಿ ಕೈಮೀರಿ ಹೋಗುತ್ತಿದೆ ಎನ್ನಿಸಿತು. ಬಹಳ ವಿವರವಾಗಿ ಹಸುವನ್ನು ಪರೀಕ್ಷಿಸಿದ. ಹೊಟ್ಟೆ ಬಿಗಿದುಕೊಂಡು ಗಟ್ಟಿಯಾಗಿರುತ್ತಿತ್ತು. ಮುಟ್ಟಿದರೆ ರಾಗಿ ಅಥವ ಜೋಳದ ಹಿಟ್ಟಿನ ಚೀಲವನ್ನು ಮುಟ್ಟಿದಂತಿರದೆ ಸಿಮೆಂಟಿನ ಮೂಟೆಯನ್ನು ಮುಟ್ಟಿದಂತಾಗುತ್ತಿತ್ತು. ಹಸು ನಿಧಾನಕ್ಕೆ ಸವೆದು ಹೋಗುತ್ತಿತ್ತು. ಅವನಿಗೆ ಭಯವಾಗತೊಡಗಿತು. ತನಗೆ ಬರಬಹುದಾದ ಕೆಟ್ಟ ಹೆಸರಿನಿಂದ ತನ್ನ ಪ್ರಾಕ್ಟೀಸು ಕಮ್ಮಿಯಾದರೇನು ಗತಿ ಎಂದು ಹಳಹಳಿಸಿದ.

ಚಿಕ್ಕಮ್ಮನ ಮನೆಯ ಸ್ಥಿತಿ ಶೋಚನೀಯವಾಗತೊಡಗಿತು. ಐವತ್ತು ಸಾವಿರ ರೂಪಾಯಿಯ ಹಸು! ಬ್ಯಾಂಕಿನಲ್ಲಿ ಬೆಳೆಯುತ್ತಿರುವ ಸಾಲ! ಹುಷಾರಾಗದ ಕಾಯಿಲೆ! ಹಸು ಮೇಲೆ ಪ್ರಯೋಗಿಸುತ್ತಿರುವ ಅಸಂಖ್ಯಾತ ಔಷಧಗಳು! ಇದರ ಹಾಲು ಕುಡಿದರೇನು ಕೇಡೋ? ಎಲ್ಲರಿಗೂ ನಿದ್ದೆ ಇಲ್ಲದ ರಾತ್ರಿಗಳು ದೀರ್ಘವಾಗತೊಡಗಿದವು. ಕೆಟ್ಟ ಕನಸುಗಳು ಬೆಚ್ಚಿ ಬೀಳಿಸತೊಡಗಿದವು. ಬಡವಿ ಚಿಕ್ಕಮ್ಮ ಕಾಲ್ನಡಿಗೆಯಲ್ಲಿ ಸುತ್ತ ಹತ್ತಾರು ದೇವಸ್ಥಾನಗಳ ಅಲೆದು ಬಂದಳು. ಹತ್ತಾರು ಹರಕೆಗಳ ಹೊತ್ತು ನಿಂತಳು. ದೇವರೆದುರು ಗೋಗರೆದಳು.

ಆಗ ಊರ ಹನುಮಂತನ ಗುಡಿಯಲ್ಲಿ ಬಿದ್ದುಕೊಂಡಿರುತ್ತಿದ್ದ ಹುಚ್ಚ ಮೂಡ್ಲಿ, 'ಚಿಕ್ಕಮ್ಮ, ನಾವೆಲ್ಲ ಎಷ್ಟು ಕೆಟ್ಟೋಗಿದೀವಿ ಅಂದ್ರೆ ಆ ದೇವ್ರು ನಮ್ಮಾತು ಕೇಳಿಸಿಕಣಲ್ಲ. ಭಂಡ ಬಾಳು ಬಾಳ್ತಿದೀವಿ ನಾವು. ನಮಿಗೆ ದೇವರಲ್ಲಿ ಬೇಡಿಕೊಳ್ಳೋ ಯೋಗ್ಯತೆ ಸೈತ ಇಲ್ಲ. ದೇವ್ರು ನಮ್ಮಾತು ಯಾಕೆ ಕೇಳ್ಬೇಕು?' ಎಂದು ಊರಿಗೂರೇ ನಡುಗುವಂತೆ ಕೂಗು ಹಾಕಿದ. ಹೇಳೋರು ಕೇಳೋರು ಹಿಂದೆ ಮುಂದೆ ಯಾರೂ ಇಲ್ಲದ ಮೂಡ್ಲಿ 'ಇದ್ದರಿಲ್ಲಿ ಎದ್ದರೆಲ್ಲೋ' ಎನ್ನುವಂತಿದ್ದ.

ಮನೆಗೆ ಮರಳಿದ ಚಿಕ್ಕಮ್ಮನಿಗೆ ಆಶ್ಚರ್ಯ ಕಾದಿತ್ತು. ಹಸು ಬಾಯಾಡುತ್ತಿತ್ತು. ಹತ್ತಿರಕ್ಕೆ ಹೋಗಿ ನೋಡಿದರೆ ಬಾಯಲ್ಲಿದ್ದದ್ದು ತೆಳುವಾದ ಪ್ಲಾಸ್ಟಿಕ್ ಹಾಳೆಯಾಗಿತ್ತು. ಪ್ಲಾಸ್ಟಿಕ್ ಹಾಳೆ ಗಾಳಿಯಲ್ಲಿ ತೇಲಿಬಂದು ಕೊಟ್ಟಿಗೆ ಸೇರಿತ್ತೋ ಏನೋ? ಹಸು ಬಾಯಿಂದ ಹೊರಗೆ ಇಳಿಬಿದ್ದಿದ್ದ ಪ್ಲಾಸ್ಟಿಕ್ಕನ್ನು ಕಿತ್ತೆಸೆದಳು. ಸರ್ವಾಂತರ್ಯಾಮಿ ಪ್ಲಾಸ್ಟಿಕ್ಕಿಗೆ ಚಿಕ್ಕಮ್ಮ ಅತಿ ಕೆಟ್ಟದಾಗಿ ಬೈದಳು. ಆವತ್ತು ಸಾಯಂಕಾಲ ಮನೆಗೆ ಬಂದ ಡಾಕ್ಟ್ರಿಗೆ ಪ್ಲಾಸ್ಟಿಕ್ ವಿಷಯ ತಿಳಿಸಿದಳು. ಆಗ ಡಾಕ್ಟ್ರಿಗೆ ಹಸುವಿನ ರೋಗದ ಕಾರಣ ಮಿಂಚಿನಂತೆ ಹೊಳೆಯಿತು.

'ಚಿಕ್ಕಮ್ಮ, ಹಸುಗೆ ನಾಳೆಯೇ ಹೊಟ್ಟೆಯ ಆಪರೇಷನ್ ಮಾಡ್ಬೇಕು. ಹೊಟ್ಟೆ ಕೊಯ್ದು ಅದು ಎಂದಿನಿಂದಲೋ ತಿನ್ನುತ್ತ ಬಂದಿರುವ ಪ್ಲಾಸ್ಟಿಕ್ಕನ್ನು ತೆಗೆದುಹಾಕಿದರೆ ಮಾತ್ರ ಹಸು ಬದುಕುಳಿಯುತ್ತದೆ. ಯಾಕೆಂದರೆ, ಪ್ಲಾಸ್ಟಿಕ್ ಹೊಟ್ಟೆಯಲ್ಲಿ ಜೀರ್ಣವಾಗುವುದಿಲ್ಲ ಮತ್ತು ಸಗಣಿಯಲ್ಲಿ ಹೊರಗೆ ಬರುವುದೂ ಇಲ್ಲ' ಎಂದು ಕೆಲಹೊತ್ತು ಸುಮ್ಮನಿದ್ದ. ಅನಂತರ, 'ಆಪರೇಷನ್ನಿಗೆ ಬಹಳ ದುಡ್ಡು ಬೇಕಾಗುತ್ತೆ.' ಎಂದ. ಚಿಕ್ಕಮ್ಮನಿಗೆ ಒಪ್ಪದೆ ಬೇರೆ ದಾರಿಯಿರಲಿಲ್ಲ.

ಮರುದಿನ ಬೆಳಗ್ಗೆ ಎಂಟು ಗಂಟೆಗೆಲ್ಲ ಡಾಕ್ಟ್ರು ಹಸುವನ್ನು ಬಲಗಡೆ ಪಕ್ಕೆಯ ಮೇಲೆ ಮಲಗಿಸಿಕೊಂಡು ಎಡಪಾರ್ಶ್ವದಿಂದ ಹೊಟ್ಟೆಯನ್ನು ಕೊಯ್ದು ಒಳಗಡೆ ಎಷ್ಟೋ ತಿಂಗಳುಗಳಿಂದ